## 90

# "ಶಿಲುಬೆಯ ಮೇಲಿರುವ ಕಳ್ಳನ ಬಗ್ಗೆ ಏನನ್ನುತ್ತೀರಿ?"

## ಮತ್ತಾಯ 27:38-44; ಲೂಕ 23:39-43,

## ಒಂದು ನಿಕಟ ನೋಟ

ಕ್ರೂಜೆಗೆ ಹಾಕಿರುವಂತೆಯೇ ಯೇಸು ಕಳ್ಳನಿಗೆ ಮುಂದೆ ಆತನು ತನ್ನೊಡನೆ ಆ ದಿನವೇ ಪರದೈಸಿನಲ್ಲಿರುವ ವಾಗ್ದಾನವನ್ನು ಮಾಡಿದನು. ಯೇಸು ತನ್ನ ವಾಗ್ದಾನವನ್ನು ಕೈಕೊಂಡನು ಎಂದು ನಾವು ನಂಬುತ್ತೇನೆ - ಆ ಕಳ್ಳನು ಸತ್ತ ದಿನವೇ ದೇವದೂತರು ಬಂದು ಆತನನ್ನು ತೆಗೆದುಕೊಂಡು ಹೋಗಿ ಲಾಜರನಿಗೆ ಮಾಡಿದಂತೆಯೇ ಆತನನ್ನು ಅಬ್ರಹಾಮನ ಎದೆಗೆ ಒರಗಿಸಿದರು (ಲೂಕ 16:22). ಆ ಕ್ರೈಸ್ತರಿಗೆ ಬೋಧಿಸುವ ರಕ್ಷಣಾ ಬೋಧನೆಯಲ್ಲಿ ಕೊಡಲ್ಪಡುವ ವಿವರಣೆಯಲ್ಲಿ ಈ ಸತ್ಯಾಂಶವು ಸಿದ್ಧಮಾಡಿತೋರಿಸದು.

ಕಳ್ಳನ ಬಗ್ಗೆ ಹೆಚ್ಚಾದದ್ದು ಊಹಿಸಲ್ಪಟ್ಟದ್ದಾಗಿದೆ. ಉದಾಹರಣೆಗೆ, ಆತನೊಬ್ಬ "ಪರದೇಶಿ ಪಾಪಿಯಾಗಿದ್ದನು" ಎಂದು ಅನೇಕ ಜನರು ಭಾವಿಸುವವರಾಗಿದ್ದಾರೆ. "ಪರದೇಶಿ" ಎಂಬ ಪದವು ಮೂಲತವಾಗಿ ಆತನು ಆ ದೇಶದ ನಾಗರೀಕನಲ್ಲ ಎಂಬ ಅರ್ಥವನ್ನು ಕೊಡುವುದಾಗಿದೆ; ಇದು ಕೆಲಸಾರಿ ದೇವರ ರಾಜ್ಯದ ಪ್ರಜೆಯಲ್ಲ ಎಂದೂ ಸೂಚಿಸಲೂ ಕೂಡಾ ಎಂದು ದೇವರ ವಾಕ್ಯದಲ್ಲಿ ಬಳಸಲ್ಪಟ್ಟಿದೆ (ನೋಡಿರಿ ಎಫೆಸ 2:19). ಕಳ್ಳನ ರಕ್ಷಣೆಯನ್ನು "ಪರದೈಸಿ ಪಾಪಿ" ಎಂದು ವಿಮರ್ಶಿಸುವ ಸ್ಥಿತಿಯಲ್ಲಿದ್ದಾರೋ ಅವರೇ ಅನ್ಯ ಕ್ರೈಸ್ತರು ಆಗಿದ್ದಾರೆ. ಹೇಗೋ, ಆ ಕಳ್ಳನು "ಪರದೇಶಿ ಪಾಪಿ" ಸಾಲಿನಲ್ಲಿ ಬೀಳಲಿಲ್ಲ, ಆದರೆ "ದೇವರ ತಪ್ಪಿಹೋದ ಮಗುವಿನ" ಸಾಲಿನಲ್ಲಿ ಇದ್ದಾನೆ. ಇದರ ಬಗ್ಗೆ ಯೋಚಿಸು: "ಆತನನ್ನು ಯಾರೂ ಕ್ರೂಜೆಗೆ ಹಾಕಿದರು?" ರೋಮನ್ನರೆ. ರೋಮನ್ನರು ತಮ್ಮ ಪ್ರಜೆಯನ್ನು ಕ್ರೂಜೆಗೆ ಹಾಕುವರೇ? ಇಲ್ಲ ಅವರು ಯಾರನ್ನು ಶಿಲುಬೆಗೆ ಹಾಕಿದರು? ಅವಿಧೇಯತೆಯ ವಿಷಯವು ಸಮೀಪದಲ್ಲಿಯೇ ಕೊಡಲಾಗಿದೆ. ಆ ಒಂದು ನಿರ್ದಿಷ್ಟ ವಿಷಯವು ಯೆಹೂದಿಗಳದ್ದಾಗಿತ್ತು. ಆ ಕಳ್ಳನು ಯೆಹೂದ್ಯನು ಎಂದು ನಾವು ಆರಾಮವಾಗಿ ಹೇಳಬಹುದು. "ನೀನು ದೇವರಿಗೆ ಹೆದರುವುದಿಲ್ಲವೋ?" ಎಂದು ಇನ್ನೊಬ್ಬ ಕಳ್ಳನ ಬಗೆಗಿನ ಆತನ ಮಾತುಗಳು ಆತನು ಒಬ್ಬ ಯೆಹೂದಿ ಎಂದು ಸೂಚಿಸುವವು ಆಗಿದೆ. ಹೆಚ್ಚಾದ ಅನ್ಯರು ಒಬ್ಬನೇ ದೇವರನ್ನು ಹೊಂದುವ ಬದಲು ಅನೇಕ ದೇವರುಗಳನ್ನು ಹೊಂದಿದ್ದರು. ಆತನು ವಿಧೇಯ ಯೆಹೂದಿ ಆಗಿರಲಿಲ್ಲ; ಆತನು ಹತ್ತು ಆಜ್ಞೆಗಳಲ್ಲಿ ಒಂದಾದರೂ ಆಜ್ಞೆಯನ್ನು ಉಲ್ಲಂಘಿಸಿರುತ್ತಿದ್ದನು (ವಿಮೋಚನಕಾಂಡ 20:15). ಅದಲ್ಲದೆ, ಆತನು ಒಬ್ಬ ಯೆಹೂದಿ ಆಗಿದ್ದನು. ಅದು ಆತನನ್ನು ದೇವರ ಮಗನನ್ನಾಗಿ ಮಾಡಿತ್ತು, ಯಾಕೆಂದರೆ ಯೇಸುವಿನ ಮರಣದವರೆಗೂ, ಯೆಹೂದಿಗಳು ದೇವರಾದುಕೊಂಡ ಜನಾಂಗವಾಗಿದ್ದರು (ಧರ್ಮೋಪದೇಶಕಾಂಡ 7:6). ಕಳ್ಳನ ರಕ್ಷಣೆಯು ಯಾವುದೇ ರೀತಿಯಲ್ಲಿ ಇಂದೇನಾದರೂ ಉದಾಹರಣೆಯಾಗಿ ಉಳಿದ್ದಾದರೆ, ಆ ಕ್ರೈಸ್ತನಲ್ಲ, ಒಬ್ಬ ತಪ್ಪಿಹೋದ ಕ್ರೈಸ್ತನು ಕ್ಷಮಾಪಣೆಯನ್ನು ಹೇಗೆ ಕಂಡುಕೊಳ್ಳಬಹುದು ಎಂಬುದಕ್ಕೆ ಉದಾಹರಣೆಯಾಗುವುದಾಗಿದೆ.

ಅದಲ್ಲದೆ, ಆ ಕಳ್ಳನು ದೀಕ್ಷಾಸ್ನಾನ ಹೊಂದಿಲ್ಲವೆಂಬುದನ್ನು ಸಹ ಇಲ್ಲಿ ಊಹಿಸಬಹುದಾಗಿದೆ. ಅನೇಕ ವರ್ಷಗಳ ಮುನ್ನ ಸ್ನಾನಿಕನಾದ ಯೋಹಾನನ ಸೇವೆಯು ಪ್ರಾರಂಭವಾದ ಸ್ಥಳದ ಹತ್ತಿರ ಆತನು ಮರಣಿಸಿದನು. ಮತ್ತಯನು ಯೋಹಾನನ ಆರಂಭದ

ಜನಪ್ರಿಯತೆಯನ್ನು ಈ ರೀತಿಯಲ್ಲಿ ಬರೆದಿದ್ದಾನೆ: "ಆಗ ಯೆರೂಸಲೇಮು ಯೂದಾಯವೂ ಯೋರ್ದನ ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯು ಅವನ ಬಳಿಗೆ ಹೊರಟುಹೋಗಿ, ಅವರು ತಮ್ಮತಮ್ಮ ಪಾಪಗಳನ್ನು ಹೇಳಿಕೊಂಡು ಯೋರ್ದನ್ ಹೊಳೆಯಲ್ಲಿ ಅವನಿಂದ ಸ್ನಾನ ಮಾಡಿಸಿಕೊಳ್ಳುತ್ತಿದ್ದರು" (ಮತ್ತಾಯ 3:5, 6). ಆ ಸ್ಥಳದಲ್ಲಿ ಇದ್ದ *ಅನೇಕರು* ಯೋಹಾನ ನಿಂದ ದೀಕ್ಷಾಸ್ನಾನ ಮಾಡಿಸಿಕೊಂಡರು. ನಂತರದಲ್ಲಿ ಯೇಸು ತನ್ನ ಸೇವೆಯನ್ನು ಅದೇ ಸ್ಥಳದಲ್ಲಿ ಆರಂಭಿಸಿದನು, ಆತನು ಮತ್ತು ಆತನ ಶಿಷ್ಯರು ಯೋಹಾನನಿಗಿಂತ ಹೆಚ್ಚು ಜನರನ್ನು ದೀಕ್ಷಾಸ್ನಾನ ಮಾಡಿಸಿದರು (ಯೋಹಾನ 4:1; ನೋಡಿರಿ 3:26). ಅದೇ ಸ್ಥಳದಲ್ಲಿ ಆ ಕಳ್ಳನು ಯೋಹಾನನಿಂದಲೋ ಅಥವಾ ಯೇಸುವಿನ ಶಿಷ್ಯರಿಂದಲೂ ದೀಕ್ಷಾಸ್ನಾನ ಹೊಂದಿದ ಸಾಧ್ಯತೆಯು ಇಲ್ಲವೇ?[1] ಇದು ಸಂಭವಿಸಿದೆಯೋ ಇಲ್ಲವೂ ಅದು ಮಹತ್ವವಲ್ಲ. ಆದರೆ ಹೀಗೆ ಮಾಡಲ್ಪಟ್ಟ ವಾದಕ್ಕೆ ಸತ್ಯವೇದದ ಭಾಗದಿಂದ ಆಧಾರಿತ ಯಾವುದೇ ಕಲ್ಪನೆಯು ಇಲ್ಲ.

ನಾನು ಏನು ಹೇಳುತ್ತೇನೆಂದರೆ ಆ ಕಳ್ಳನು ದೀಕ್ಷಾಸ್ನಾನ ಹೊಂದಿದನೋ ಇಲ್ಲವೋ ಅದು ಮುಖ್ಯವಲ್ಲ? ಈ ಹಿಂದೆಯೇ ಸೂಚಿಸಿದಂತೆ, ಆತನ ರಕ್ಷಣೆಯು ಇಂದಿನ ಆಕ್ರೈಸ್ತರಿಗೆ ಎಂದಿಗೂ ಉದಾಹರಣೆಯಾಗಿಯೂ ಸೂಚಿತವಾಗಿಲ್ಲ. ಈ ಖಂಡಿತ ಮಾತನ್ನು ಮೂರು ಕಾರಣಗಳಲ್ಲಿ ಹೇಳಲು ಬಯಸುತ್ತೇನೆ.

## ಹಳೆಯ ನಿಯಮವು ತೆಗೆದುಹಾಕಲ್ಪಡುವ ಮುನ್ನ ಆತನು ರಕ್ಷಿಸಲ್ಪಟ್ಟನು

ಆ ಕ್ರೈಸ್ತರ ಪರಿವರ್ತನೆಗೆ ಉದಾಹರಣೆಯಾಗಿ ಕಳ್ಳನ ಕಥೆಯನ್ನು ಬಳಸುವಂಥದ್ದು "ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ *ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ* ಆಗಿರು" (ಒತ್ತಿ ಹೇಳಿದ್ದು ನನ್ನದು) 2 ತಿಮೋಥೆ 2:15ರಲ್ಲಿನ ತತ್ವವನ್ನು ಹಾಳು ಮಾಡುವದು ಆಗಿದೆ. ಹಳೆಯ ಒಪ್ಪಂದ (ಹಳೆ ಒಡಂಬಡಿಕೆ) ಅವಧಿಗೆ ಸಂಬಂಧಿಸಿದಂತದ್ದು ಮತ್ತು ಹೊಸ ಒಪ್ಪಂದ ಅವಧಿಗೆ ಸಂಬಂಧಿಸಿದಂತದ್ದು ಇವುಗಳ ಮಧ್ಯ ಭಿನ್ನತೆಯನ್ನು ಮಾಡುವದು.

ಸತ್ಯವೇದದ ವಾಕ್ಯವನ್ನು ಅರ್ಥೈಸುವದಕ್ಕೆ ಇರುವ ಸರಿಯಾದ ಒಂದೇ ಮಾರ್ಗವಾಗಿದೆ. ಯೇಸುವಿನ ಮರಣವು ಹಳೆಯ ಮತ್ತು ಹೊಸ ಒಡಂಬಡಿಕೆಯನ್ನು ವಿಭಾಗಿಸುವ ಅಂಶವಾಗಿದೆ ಎಂದು ಸತ್ಯವೇದವು ನಮಗೆ ಬೋಧಿಸುವುದಾಗಿದೆ. ಪೌಲನು ಕೊಲಸ್ಸೆಯವರಿಗೆ ಬರೆಯುತ್ತಾ, "... ಸತ್ತವರಾಗಿದ್ದ ನಿಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಮ್ಮ ಅಪರಾಧ ಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು" (ಕೊಲಸ್ಸೆ 2:13, 14) ಎಂದು ಹೇಳಿದ್ದಾನೆ. ಒಂದು ವೇಳೆ ಆ ಅಪೋಸ್ತಲನ ಮನದಲ್ಲಿ ಯಾವ ಸಂಗತಿಯು ಇದೆ ಎಂಬ ಪ್ರಶ್ನೆಯು ಇರುವುದಾದರೆ, ವಚನ 16ರಲ್ಲಿರುವಂತಹ "ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮವಾಸೆ ಸಬ್ಬತ್ತು ಎಂಬ ವಿಷಯದಲ್ಲಿ" ಎಂಬಂತೆ ಅನೇಕ ಅಂಶಗಳನ್ನು ಆತನು ಪಟ್ಟಿಮಾಡುತ್ತಿದ್ದನು. "ಸಬ್ಬತ್ತ ದಿನ" ಎಂಬ ಪದದ ಮೂಲಕ ಮೋಶೆಯ ಧರ್ಮಶಾಸ್ತ್ರವನ್ನು ತನ್ನ ಹೇಳಿಕೆಯಲ್ಲಿ ಸೇರಿಸಿದ್ದಾನೆ ಎಂಬುದು ನಿಖರವಾಗುತ್ತದೆ: ಹತ್ತು ಆಜ್ಞೆಗಳಲ್ಲಿ ಇದು ಒಂದಾಗಿದೆ. "ಸಬ್ಬತ್ತ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದನ್ನು ಜ್ಞಾಪದಲ್ಲಿ ಇಟ್ಟಿಕೋ" (ವಿಮೋಚನಕಾಂಡ 20:8) ಎಂಬುದೇ.

"ತೆಗೆದು ಹಾಕು" ಮತ್ತು "ಮಾರ್ಗದಿಂದ ತೆಗೆದು ಹಾಕು" ಎಂಬಪದಗಳು ನ್ಯಾಯವು ಇಲ್ಲವಾಗಿ ಹೋಗಿದೆ ಎಂಬುದನ್ನು ಸೂಚಿಸುವ ಬಲವಾದ ಪದಗಳು ಆಗಿವೆ. ಇದು ಕ್ರಿಸ್ತನನ್ನು ಶೂಲಕ್ಕೆ ಹಾಕಿದಂತಹ ಕಟ್ಟಿಗೆಯ ತುಂಡನ್ನು ಇವು ಆಧಾರಿಸುತ್ತಿಲ್ಲ, ಆದರೆ ಬದಲಾಗಿ *ಯೇಸುವಿನ ಮರಣದ* ಪ್ರಸ್ತಾಪವನ್ನು ಸೂಚಿಸುವವುಗಳಾಗಿವೆ. ಯೇಸು ಮತ್ತು ಯೇಸುವೇ ಮಾತ್ರ ಹಳೆಯ ಒಡಂಬಡಿಕೆಯಲ್ಲಿ ಸಂಪೂರ್ಣವಾಗಿಸುವವನು, ಅದರ ಬೇಡಿಕೆಗಳನ್ನು

ನಿಖರವಾಗಿ ಇಡುವವನೂ ಆಗಿದ್ದಾನೆ. ಆತನ ಜೀವಿತದ ಕೊನೆಯಲ್ಲಿ, ಅದು ಸಂಪೂರ್ಣವಾದ (ಪರಿಪೂರ್ಣವಾದ) ಒಪ್ಪಂದವಾಯಿತು. ಯೇಸುವಿನ ಮರಣದಲ್ಲಿ ಹಳೆಯ ಒಡಂಬಡಿಕೆಯು "ತೆಗೆದು ಹಾಕಲ್ಪಟ್ಟಿತು." ಅದೇ ಸಮಯದಲ್ಲಿ ಹೊಸ ಒಡಂಬಡಿಕೆಯು ಹೊರಕ್ಕೆ ಬಂತು.

ಇಬ್ರಿಯ 9:15ರಲ್ಲಿ ಲೇಖಕನು ಯೇಸುವನ್ನು "ಹೊಸ ಒಡಂಬಡಿಕೆಯ ಮಧ್ಯಸ್ಥಗಾರ" ಎಂದು ಹೇಳುತ್ತಾನೆ. ಆತನು ನಂತರ ಹೊಸಒಡಂಬಡಿಕೆಯು ಬೆಳಕಿಗೆ ಬರುವಲ್ಲಿ ಯಾವುದು ಪ್ರಕಟವಾಗುವದು ಎಂದು ಹೇಳುತ್ತಾ ವಿವರಿಸುತ್ತಾನೆ "ಮರಣಶಾಸನದಲ್ಲಿರುವಂತೆ ಅದನ್ನು ಬರೆಯಿಸಿದವನ ಮರಣವು ಪ್ರಸಿದ್ಧಿಯಾಗಬೇಕಷ್ಟೆ. ಮರಣ ಶಾಸನವು ಮರಣವಾದ ಮೇಲೆ ನಡೆಯುವುದೇ ಹೊರತು ಎಂದಿಗೂ ಸಲ್ಲುವುದಿಲ್ಲ" (ಇಬ್ರಿಯ 9:16, 17). ಈ ವಿವರಣೆಯು ವಿಶೇಷ ಒಡಂಬಡಿಕೆಯ (ಒಪ್ಪಂದ) ಎಂದು ಕರೆಯಲ್ಪಡುವ "ಮೃತ್ಯುಪತ್ರ ಮತ್ತು ಒಡಂಬಡಿಕೆ" ಮೇಲೆ ಆಧಾರಿತವಾದದ್ದಾಗಿದೆ. "ಮೃತುಪತ್ರ ಮತ್ತು ಒಡಂಬಡಿಕೆ" ಇವುಗಳು ಯಾವಾಗ ಪರಿಣಾಮವನ್ನು ತರುವವು ಆಗಿವೆ? ಯಾವಾಗ ಮೃತ್ಯುಪತ್ರ ಮಾಡುವವನು ಮರಣಿಸುತ್ತಾನೋ ಆಗಲೇ ಹೊರತು ಅದಕ್ಕಿಂತ ಮೊದಲು ಅಲ್ಲ. ಅನೇಕ ಬೈಬಲ್‌ಗಳು ಮತ್ತಾಯನ ಪುಸ್ತಕಕ್ಕಿಂತ ಮೊದಲಿನ ಪುಟದಲ್ಲಿ "ಯೇಸು ಕ್ರಿಸ್ತನ ಹೊಸ ಒಡಂಬಡಿಕೆ" ಎಂಬ ವಾಕ್ಯಗಳನ್ನು ಹೊಂದಿವೆ. ಯೇಸುವಿನ ಹೊಸೊಡಂಬಡಿಕೆಯು ಯಾವಾಗ ಪರಿಣಾಮಮಾಡಿತು ಆತನು ಮರಣಿಸಿದಾಗಲೇ. ಕ್ರಿಸ್ತನ ಮರಣವು ಹಳೆಯ ಒಡಂಬಡಿಕೆಯ ಯುಗದ ಕೊನೆ ಮತ್ತು ಹೊಸ ಒಡಂಬಡಿಕೆಯ ಯುಗದ ಆರಂಭವು ಆಗಿದೆ.

ಕಳ್ಳನು ಅನ್ಯರಿಗೆ ಇಂದು ರಕ್ಷಣೆಯ ಉದಾಹರಣೆಯಾಗಲಾರನು ಯಾಕೆಂದರೆ ಹಳೆಯ ನಿಯಮವು ತೆಗೆದುಹಾಕಲ್ಪಡುವ ಮೊದಲೇ ಆತನು ಕ್ಷಮಿಸಲ್ಪಟ್ಟನು. ನಿಜ, ಯೇಸು ಮರಣಿಸುವುದಕ್ಕಿಂತ ಮೊದಲ ಕೆಲವು ತಾಸುಗಳ ಮುನ್ನ ಆತನು ಪರದೈಸಿನ ವಾಗ್ದಾನ ವನ್ನು ಹೊಂದಿದನು. ಆದರೆ ವಾಗ್ದಾನವು ಇನ್ನು ಶಿಲುಬೆಯ "ಹಳೆಯ ಒಡಂಬಡಿಕೆಯ ಕಡೆಯದರ ಮೇಲೆ" ಕೊಡಲ್ಪಡುತ್ತಾ ಇದೆ.

ಹೊಸ ಒಡಂಬಡಿಕೆ ಮತ್ತು ಮೃತ್ಯುಪತ್ರ ಮತ್ತು ಒಡಂಬಡಿಕೆ ಮಧ್ಯದ ಹೋಲಿಕೆಯು ವಿಸ್ತರಿಸಲ್ಪಡಬೇಕು. ಮೃತ್ಯುಪತ್ರದ ಉದ್ದೇಶ ತತ್ವವು ಮೃತ್ಯುಪತ್ರಮಾಡುವವನ ಆಸ್ತಿಯ ಹಂಚಿಕೆಯೇ ಆಗಿದೆ. ಮೃತ್ಯು ಪತ್ರಮಾಡುವವನ ಮರಣದ ನಂತರ, ಜನರು ಮೃತ್ಯು ಪತ್ರದ ಶರತ್ತುಗಳು ಮತ್ತು ಸವಲತ್ತಿನ ಪ್ರಯೋಜನಗಳನ್ನು ಪಾಲಿಸಲೇಬೇಕಾಗುವದು. ಮೃತ್ಯು ಪತ್ರಮಾಡುವವನು ಜೀವದಿಂದಿರುವಷ್ಟು ಸಮಯ ಆತನು ತನ್ನ ಆಸ್ತಿಯನ್ನು ತನ್ನ ಇಚ್ಛೆಗೆ ತಕ್ಕ ಹಾಗೆ ಹಂಚಿಕೆಯನ್ನು ಆತನು ಮಾಡಬಹುದು.

ದಾಖಲೆಗಳು ಇರುವಂತೆ, ಆತನ ಇಹಲೋಕದ ಸೇವೆಯಲ್ಲಿ, ಯೇಸು ಪಾಪಕ್ಷಮಾಪಣೆಯ ಹಕ್ಕನ್ನು ಕೇವಲ ಕೆಲಸಾರಿ ಮಾತ್ರ ಪ್ರಯೋಗಿಸಿದನು: ಪಾರ್ಶ್ವವಾಯು ರೋಗಿಯ ಪ್ರಕರಣ (ಮತ್ತಾಯ 9:2-6), ವ್ಯಭಿಚಾರಣಿಯಾದ ಸ್ತ್ರೀ (ಯೋಹಾನ 8:3-11). ಮತ್ತು ಶಿಲುಬೆಯ ಮೇಲಿನ ಕಳ್ಳ. ಇವೆಲ್ಲವುಗಳು ಯೇಸು ತನ್ನ "ಕೊನೆಯ ಮರಣ ಶಾಸನ ಮತ್ತು ಒಡಂಬಡಿಕೆ" ಪರಿಣಾಮದಲ್ಲಿ ಬರುವಂತೆ ತನ್ನ ಆತ್ಮೀಕ ಆಸ್ತಿಯನ್ನು ಹಂಚುವ ಮುಂಚಿನ ಉದಾಹರಣೆಗಳು ಆಗಿವೆ; ಯಾವೊಂದು ಇಂದು ಅಕ್ರೈಸ್ತರು ರಕ್ಷಿಸಲ್ಪಟ್ಟಂತ ಆದಾರದ ಮೇಲೆ ಇರುವವುಗಳು ಅಲ್ಲ.

## ಕ್ರಿಸ್ತನು ದೊಡ್ಡ ನಿಯೋಗವನ್ನು ಕೊಡವುದಕ್ಕಿಂತ ಮುಂಚೆ ರಕ್ಷಿಸಲ್ಪಟ್ಟನು

ಯೇಸುವಿನ ವೈಯಕ್ತಿಕ ಸೇವೆಯ ಆರಂಭದಲ್ಲಿ, ರಕ್ಷಣೆಯ ಅವಶ್ಯಕತೆಗಳ ಆಧಾರಗಳನ್ನು ಮಾಡಿದನು. ಉದಾಹರಣೆಗೆ ಆತನು ಹೊಸ ಹುಟ್ಟಿನ ಬಗ್ಗೆ ಮಾತನಾಡಿದನು (ಯೋಹಾನ 3:3, 5) ಮತ್ತು ಪರಿವರ್ತನೆಯ ಬಗೆಗೆ ಮಾತನಾಡಿದನು (ಮತ್ತಾಯ 18:3). ಆತನು ನಂಬಿಕೆಯ ಅವಶ್ಯಕತೆಯ ಬಗೆಗೆ (ಯೋಹಾನ 8:24), ಪಶ್ಚಾತ್ತಾಪದ ಅನಿವಾರ್ಯತೆ

(ಲೂಕ 13:3), ಮತ್ತು ಅರಿಕೆಯ ಮಹತ್ವ (ಮತ್ತಾಯ 10:32) ಇವುಗಳನ್ನು ಒತ್ತಿಹೇಳಿದನು. ಇದಲ್ಲದೆ ಆತನು ಕೊಟ್ಟ ಆ ದೊಡ್ಡ ನಿಯೋಗವನ್ನು ಆತನ ಮರಣ, ಹೂಣುವಿಕೆ ಮತ್ತು ಪುನರುತ್ಥಾನದ ವರೆಗೆ ಮಾತ್ರ ಈ ಶ್ರೇಷ್ಟ ನಿಯೋಗವನ್ನು ಕೊಡಲಿಲ್ಲ. ಯೋಗ್ಯವಾಗಿ ದೇವರ ಕೃಪೆಯನ್ನು ಹೊಂದಬೇಕೆಂದರೆ ಜನರು ಏನು ಮಾಡಬೇಕು ಎಂಬುದಕ್ಕೆ ಆತನ ರಕ್ಷಣೆಯ ಶರತ್ತು ಈ ರೀತಿಯಲ್ಲಿ ಹೇಳುವುದಾಗಿದೆ.

> "ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ. ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ ..." (ಮತ್ತಾಯ 28:19, 20).
>
> "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಯನ್ನು ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16).
>
> ಆಮೇಲೆ ಅವರು ಶಾಸ್ತ್ರವಚನ ತಿಳಿಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದು ಅವರಿಗೆ ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮಿನಿಂದ ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದು (ಲೂಕ 24:46, 47).

ಮೂಲಬದ್ಧವಾದ ನ್ಯಾಯದ ತತ್ವವೆಂದರೆ ಕಾನೂನು ಹಿಂಚಲಿಸುವುದಾಗಿರುವುದಿಲ್ಲ. ಈ ಏರ್ಪಾಟು United States ಸಂವಿಧಾನದ ವಿಧಿ I ವಿಧಿ 9ರಲ್ಲಿ ಒಳಗೊಂಡಿರುವುದಾಗಿದೆ: "No ... ex post facto Law shall be passed."[2] ಈ ಏರ್ಪಾಟಿನ ಒಂದು ಅನ್ವಯವು. ಇಂದು ಶಾಸನಾಂಗವು ಕಾನೂನನ್ನು ಜಾರಿಗೆ ತಂದದ್ದಾದರೆ, ಒಬ್ಬ ವ್ಯಕ್ತಿಯನ್ನು ಕೋರ್ಟಿಗೆ ತರುವ ಹಾಗಿಲ್ಲ ಯಾಕೆಂದರೆ ಆತನು ಹಾಗೆ ಮಾಡಿದ್ದಾದರೆ ಆತನು ನಿನ್ನೆಯ ನಿಯಮವನ್ನು ಮುರಿದಂತೆ ಆಗುತ್ತದೆ. ಅದೇ ರೀತಿಯಲ್ಲಿ ಆ ಕುಖ್ಯಾತ ಕಳ್ಳನು ದೊಡ್ಡ ನಿಯೋಗವು ಕೊಡುವ ಮುನ್ನವೇ ಮರಣಿಸಿದ್ದಾದರೆ ಅದರ ಶರತ್ತುಗಳು ಆತನಿಗೆ ಅನ್ವಯಿಸುವುದಿಲ್ಲ. ಅದಲ್ಲದೇ ಅವುಗಳು ನಮಗೆ ಅನ್ವಯಿಸುವವು ಆಗಿವೆ. ಕಳ್ಳನು ದೀಕ್ಷಾಸ್ನಾನವನ್ನು ಹೊಂದಿರಲಿಲ್ಲ, ಆದರೆ ನಾವು ಹೊಂದಿದ್ದೇವೆ. ಆ ದೀಕ್ಷಾಸ್ನಾನವು ಇಂದು ಅವಶ್ಯವಾಗಿಲ್ಲ ಎಂದು ಆತನ ರಕ್ಷಣೆಗೆ ಆಧಾರವಾಗಿ ಜನರು ಪ್ರಯತ್ನಿಸುತ್ತಿರುವುದು ಯಾಕೆ?

ಬಹುಶಃ ಈ ದೃಷ್ಟಾಂತವು ಸಹಾಯಿಸಬಹುದಾಗಿದೆ: ನಿಮ್ಮ ಸಂದಾಯಿಸಬೇಕಾದ federal income tax ನ್ನು ತುಂಬದೇ ಹೋದಾ ಮತ್ತು Internal Revenue Service ದಿಂದ ನಿಮಗೆ ಕರೆಯಬಂದದ್ದಾದರೆ ಏನಾಗುವದು? IRS ಏಜೆಂಟ್: ನೀವು ನಿಮ್ಮ ತೆರಿಗೆಯನ್ನು ತುಂಬಬೇಕು. ಒಳ್ಳೆಯ ನಾಗರೀಕರಿಗೆ ತಮ್ಮ ಕಾರ್ಯವನ್ನು ಮಾಡುತ್ತಾರೆ ಎಂದು ಹೇಳು ವನು. "ಆದರೆ ಜಾರ್ಜ್‌ವಾಶಿಂಗ್ಟನ್ ಬಗ್ಗೆ ಏನು ಹೇಳುತ್ತೀರಿ?" ಆತನು ತನ್ನ ಆದಾಯ ತೆರೆಗಿ ಯನ್ನು ತುಂಬುವುದಲ್ಲ ಮತ್ತು ಆದರೂ ಆತನು ಹೆಸರಾಂತ ಒಳ್ಳೆಯ ನಾಗರೀಕ. ಅಬ್ರಹಾಂ ಲಿಂಕನ್ ಬಗ್ಗೆ ಏನು ಹೇಳುತ್ತೀರಿ? ಆತನೂ ಕೂಡಾ ಅದಾಯ ತೆರಿಗೆಯನ್ನು ತುಂಬಿಲ್ಲವಲ್ಲ ಆತನೂ ಕೂಡಾ ಒಳ್ಳೆಯ ನಾಗರೀಕನಲ್ಲವೇ? "ಈ ಇಬ್ಬರು ದೊಡ್ಡ ವ್ಯಕ್ತಿಗಳು ಒಳ್ಳೆಯ ನಾಗರೀಕರಾಗಿದ್ದಾಗ್ಯೂ ಆದಾಯ ತೆರೆಗೆಯನ್ನು ತುಂಬಲಿಲ್ಲ, ಹಾಗಿದ್ದಾಗ ನಾನೇಕೆ!" ಎಂದು ಕೇಳಬಹುದು. ಇದಕ್ಕೆ ಆ ಏಜೆಂಟನ್ನು ಪ್ರಭಾವಿತನಾಗಬಹುದು ಎಂದು ನೀವು ಎಣಿಸುತ್ತಿರಾ? ಹಾಗೆಂದೂ ಯೋಚಿಸದಿರಿ! ನೀನಂತೂ ತೆರಿಗೆಯನ್ನು ತುಂಬುವುದು ಬೇಡ: ಎಂದು ಹೇಳ ಬಹುದು ಎಂದು ಯೋಚಿಸುವಿರಾ. ಆ ಏಜೆಂಟನ್ನು 1913ರಲ್ಲಿ ಮಾಡಲ್ಪಟ್ಟಂಥ ಸ್ವೀಕರಿಸ

ಬೇಕಾದ ಆದಾಯತೆರಿಗೆಯ ಏರ್ಪಾಟಿಗೋಸ್ಕರ ಮಾಡಲ್ಪಟ್ಟಂಥ ಮತ್ತು ಶ್ರೀ ಲಿಂಕನ್‌ವರಿಗೆ ಅದು ಅನ್ವಯವಾಗಲಿಬಹುದು ಆದರೆ ಇದು ನಮಗೆ ಅನ್ವಯವಾಗುವುದಾಗಿದೆ. ಆತನು ಯೇಸು ರಕ್ಷಣೆಯ ಮಹಾ ನಿಯೋಗದ ಶರತ್ತನ್ನು ಕೊಡುವ *ಮುನ್ನವೇ* ರಕ್ಷಿಸಲ್ಪಟ್ಟಿದ್ದರಿಂದ ದೀಕ್ಷಾಸ್ನಾನ ಹೊಂದದೆ ಇರುವುದಕ್ಕೆ ಇದು ಕಳ್ಳನಿಗೆ ಒಂದು ನೆಪವಾಯಿತು ಎಂದು ನಾವು ಎತ್ತಿ ತೋರಿಸಲಾರೆವು.

## ವಾಸ್ತವವಾಗಿ ಸುವಾರ್ತೆಯು ಬೋಧಿಸಲ್ಪಡುವ ಮುನ್ನವೇ ಆತನು ರಕ್ಷಿಸಲ್ಪಟ್ಟನು

ಪೌಲನ ಪ್ರಕಾರ ಸುವಾರ್ತೆಯ ಕೇಂದ್ರವು ("ಒಳ್ಳೆಯ ವಾರ್ತೆ") ಮೂರು ಮುಖ್ಯ ಘಟನೆಗಳಲ್ಲಿ ಹೊಂದಾಣಿಕೆಯಾಗಿದೆ: ಅವು ಯೇಸುವಿನ ಮರಣ ಹೂಣುವಿಕೆ ಮತ್ತು ಪುನರುತ್ಥಾನಗಳೇ ಆಗಿವೆ. ಆತನು ಕೊರಿಂಥದವರಿಗೆ ಬರೆಯುತ್ತಾ,

> ಸಹೋದರರೇ ನಾನು ನಿಮಗೆ ತಿಳಿಸಿದ *ಸುವಾರ್ತೆಯನ್ನು* ನೆನಪಿಗೆ ತರುತ್ತೇನೆ. ನೀವು ಅದನ್ನು ಸ್ವೀಕರಿಸಿದಿರಿ ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಗಟ್ಟಿಯಾಗಿ ಹಿಡುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರ್ಧಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ.
>
> ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಯೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡಿದ್ದೇ. ಅದೇನೆಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ *ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ* ಸತ್ತನು; ಹೂಣಲ್ಪಟ್ಟನು ಶಾಸ್ತ್ರದ ಪ್ರಕಾರ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು (1 ಕೊರಿಂಥ 15:1-4; ಒತ್ತಿ ಹೇಳಿದ್ದು ನನ್ನದು).

ಕಳ್ಳನಿಗೆ ಪರದೈಸಿನ ವಾಗ್ದಾನವು ಕೊಡಲ್ಪಟ್ಟ ಸಮಯದಲ್ಲಿ ಮರಣ, ಹೂಣುವಿಕೆ ಮತ್ತು ಪುನರುತ್ಥಾನದ ಸರಣಿಯು ಪ್ರಗತಿಯಲ್ಲಿತ್ತು ಆದರೆ ಯೇಸು ಇನ್ನೂ ಮರಣಿಸಿರಲಿಲ್ಲ; ಆತನ ಹೂಣುವಿಕೆಯು ಮತ್ತು ಪುನರುತ್ಥಾನವು ಇನ್ನೂ ಮುಂದಿತ್ತು. ಕರ್ತನು ಇನ್ನೂ ಮರಣದಿಂದ ಎದ್ದನಂತರ ಅಲ್ಲಿಯವರೆಗೂ ಸುವಾರ್ತೆಯು ಇನ್ನೂ ವಾಸ್ತವವಾಗಿ ಬೋಧಿಸಲ್ಪಟ್ಟಿರಲಿಲ್ಲ. ಪಂಚಾಶತ್ತಮದಿನದಂದು ಅಪೊಸ್ತಲನಾದ ಪೇತ್ರನಿಂದ ಕ್ರಿಸ್ತನ ದೀವಾರೋಹಣದ ಹತ್ತು ದಿನಗಳ, ನಂತರ ಅದರ ಸಂಪೂರ್ಣತೆಯು ಮೊದಲಬಾರಿ ಬೋಧಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:23, 24, 32, 36).

ರಕ್ಷಣೆಗೆ ಇಂದು ಈ ಅದ್ಭುತವಾದ ಸುವಾರ್ತೆಯು ದೇವರ ಶಕ್ತಿಯೇ ಆಗಿದೆ (ರೋಮಾಪುರ 1:16). ಅದಿಲ್ಲದೆ ನಾವು ರಕ್ಷಣೆ ಹೊಂದಲಾರೆವು. ಇದಕ್ಕೆ ವ್ಯತ್ಯಾಸವಾಗಿ ಇದು ಸಾರ್ವಜನಿಕವಾಗಿ ಘೋಷಿಸುವ ಮುನ್ನವೇ ಆ ಕಳ್ಳನು ಮರಣಿಸಿದನು. ಸಂಪೂರ್ಣ ಸುವಾರ್ತಾ ಕಥೆಯನ್ನು ಕೇಳುವ ಮುನ್ನವೇ ಆತನು ಜೀವಿಸಿದ್ದನು ಮತ್ತು ಮರಣಿಸಿದನು. ಆದ್ದರಿಂದ, ಆತನ ರಕ್ಷಣೆಯು ಅನ್ಯ ಕ್ರೈಸ್ತರಿಗೆ ಉದಾಹರಣೆಯಾಗದು, ಅದು ಸುವಾರ್ತೆಯನ್ನು ಕೇಳಬೇಕು ಮತ್ತು ಅದಕ್ಕೆ ವಿಧೇಯರಾಗಲೇಬೇಕು (1 ಪೇತ್ರ 4:17; 2 ಥೆಸಲೋನಿಕ 1:8).

## ಮುಕ್ತಾಯ

ಕಳ್ಳನು ರಕ್ಷಿಸಲ್ಪಟ್ಟ ರೀತಿಯಲ್ಲಿ ಅನೇಕರು ರಕ್ಷಣೆಯನ್ನು ಹೊಂದಲು ಬಯಸುವವರಾಗಿದ್ದಾರೆ. "ಆ ಕಳ್ಳನು ಬಹಳ ಜಾಣನು! ಇತರ ಜನರನ್ನು ಬಳಸಿಕೊಳ್ಳುತ್ತಾ ತನಗೆ ಹೇಗೆ ಬೇಕೋ ಹಾಗೆ ಆತನು ತನ್ನ ಜೀವಿತದಲ್ಲಿ ಜೀವಿಸಿದನು. ಆದರೆ ಆಗ, ಕೇವಲ ಮರಣಹೊಂದುವ ಮುನ್ನ ಆತನು ಪಶ್ಚಾತ್ತಾಪಪಟ್ಟೇಟನು ಮತ್ತು ಕರ್ತನು ಆತನನ್ನು

ರಕ್ಷಿಸಿದನು. ಅದೇ ರೀತಿಯಲ್ಲಿ ನಾನು ಕೂಡಾ ರಕ್ಷಣೆಯನ್ನು ಹೊಂದ ಬಯಸುತ್ತೇನೆ!" ಎಂದು ಕೆಲವರು ಹೇಳಬಹುದು. ಸತ್ಯವನ್ನು ಕಲಿತಾದ ಮೇಲೆ ಸತ್ಯಕ್ಕೆ ವಿಧೇಯರಾಗುವುದನ್ನು ಬೈಬಲ್ ಬೋಧಿಸುವುದಿಲ್ಲ ಮತ್ತು ಪ್ರೋತ್ಸಾಹಿಸುವುದಿಲ್ಲ. "ಈಗಲೇ ಸುಪ್ರಸನ್ನತೆಯ ಕಾಲ; ಇದೇ ಆರಕ್ಷಣೆಯ ದಿನ" ಎಂದು ಪೌಲನು ಬರೆಯುತ್ತಾನೆ (2 ಕೊರಿಂಥ 6:2).

ಯಾರಾದರೂ ಮರಣದ ಮುನ್ನ ಪಶ್ಚಾತ್ತಾಪಡುವ ನಿರ್ಧಾರವನ್ನು ಮಾಡಿದ್ದಾದರೆ, ಯಾವುದಾದರೂ ಅನೇಕ ಸಂಗತಿಗಳು ಸಂಭವಿಸಬಹುದು. ಮೊದಲು ಕರ್ತನು ಆ ಅವಕಾಶಕ್ಕಿಂತ ಮೊದಲು ಮರಳುತ್ತಾನೆ. ಎರಡನೆಯದಾಗಿ, ಆ ವ್ಯಕ್ತಿಯು ಅನಿರೀಕ್ಷಿತವಾಗಿ ಮರಣಿಸುತ್ತಾನೆ. ಮೂರನೆಯದಾಗಿ, ಕರ್ತನು ಬಾರದೆ ಇದ್ದಾಗಲೂ ಮತ್ತು ಮರಣವು ಅನಿರೀಕ್ಷಿತವಾಗಿ ಸಂಭವಿಸದೇ ಇದ್ದಾಗಲೂ ಆ ವ್ಯಕ್ತಿಯ ಹೃದಯವು ಬಹುಶಃ ಬಲು ಕಠಿಣವಾಗಿದ್ದು ಪಶ್ಚಾತ್ತಾಪಪಡುವುದು ಅಸಾಧ್ಯವೆಂದು ಆತನಿಗೆ ಕಾಣುವುದುಂಟು (ನೋಡಿರಿ ಇಬ್ರಿಯ 6:6). ಇಬ್ರಿಯ ಪುಸ್ತಕದ ಲೇಖಕನು ತನ್ನ ಓದುಗರಿಗೆ "ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟು ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" ಎಂದು ಒತ್ತಾಯಿಸುವವನಾಗಿದ್ದಾನೆ (4:7). ಕರ್ತನಿಗೆ ನೀನು ಮಾಡುವುದು ನೀನು ತಿಳಿಯುವವರೆಗೂ ಮಾಡುವುದನ್ನು ಎಂದಿಗೂ ಬಿಡಬೇಡ.

ಕಳ್ಳನು ಮರಣಿಸಿದ ಶಿಲುಬೆಯೆಡೆಗೆ ನಿನ್ನ ದೃಷ್ಟಿಯನ್ನು ಹೊರಳಿಸು ಮತ್ತು ನಮಗಾಗಿ ಮರಣಿಸಿದ ರಕ್ಷಕನು ಇರುವ ಮಧ್ಯದ ಶಿಲುಬೆಯೆಡೆಗೆ ಕೇಂದ್ರೀಕರಿಸು. ನಾವು ಆತನನ್ನು ನಿಜವಾಗಿಯೂ ಪ್ರೀತಿಸಿದ್ದೇ ಆದರೆ, ಆತನು ನಮಗೇನು ಮಾಡಲು ಕೇಳಿದ್ದಾನೋ ಅದನ್ನು ನಾವು ಮಾಡುವಾ (ಯೋಹಾನ 14:15). ಆತನಿಗೆ ವಿಧೇಯರಾಗದೇ ಇರುವುದಕ್ಕಾಗಿ ನೆವಗಳನ್ನು ಶೋಧಿಸುತ್ತಾ ಹೋಗುತ್ತೇವೆ. ಬದಲಾಗಿ ಪ್ರೀತಿಯಿಂದ ಹೊರಸೂಸುವ ಹೃದಯದಿಂದ ಮತ್ತು ಕೃತಜ್ಞತೆಯಿಂದ ಆತನಿಗೆ ನಾವು ಶರಣಾಗುವಾ.

---

ಟಿಪ್ಪಣಿಗಳು

[1]ಈ ರೀತಿಯ ಪ್ರಕರಣದಲ್ಲಿ, ಕಳ್ಳನು ಯೋಹಾನನ ಅಥವಾ ಯೇಸುವಿನ ಬೋಧನೆಯನ್ನು ಕೇಳಿರಬಹುದು. ಇದು ಯೇಸುವಿನ ರಾಜ್ಯದ ಬಗೆಗೆ ಕಳ್ಳನಿಗೆ ವಿವರಿಸಲು ಸಹಾಯಕವಾಗಿರಬಹುದು.
[2]*Grolier Multimedia Encyclopedia,* 1999 ed., s.v. "Constitution of the United States."